# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 1216/2015

| | | |
|---|---|---|
| ಸಾಕ್ಷಿಯ ಹೆಸರು | ಃ ಸಂತೋಷ್ | ಸಿ.ಡಬ್ಲ್ಯೂ ಃ 7 |
| ತಂದೆ ಹೆಸರು | ಃ ತೋಪೇಗೌಡ | ಪಿ.ಡಬ್ಲ್ಯೂ ಃ 8 |
| ವಯಸ್ಸು | ಃ 33 ವರ್ಷ | ಪ್ರಮಾಣೀಕರಿಸಿದ ದಿಃ 27/01/2023 |
| ವೃತ್ತಿ | ಃ ಮ್ಯಾಕನಿಕ್ | |
| ವಾಸ | ಃ ಹಾಸನ | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ದಿನಾಂಕಃ 16.11.2014 ರಂದು ನಾನು ಪಕ್ಕದ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆ. ಹೇಮಾವತಿ ಸೇತುವೆ ಹತ್ತಿರ ಇರುವ ಜಯಕುಮಾರ ಬಾಡಿಗೆ ಎಂ.ಎಸ್.ಐ.ಎಲ್. ಅಂಗಡಿ ಅಂಗಡಿಯಲ್ಲಿ ಕಳ್ಳತನ್ನವಾಗಿದ್ದು, ಈ ಸಂಬಂಧ ಚಾಸಾ-18 ರವರ ಮಹಜರಿಗಾಗಿ ನನ್ನನ್ನು ಕರೆದಿರುತ್ತಾರೆ. ಚಾಸಾ-1 ರವರು ಸ್ಥಳವನ್ನು ತೋರಿಸಿರುತ್ತಾರೆ. ಸದರಿ ಅಂಗಡಿಯಲ್ಲಿ 1 ನೋಕಿಯಾ ಮೊಬೈಲ್ ಹಾಗೂ 21 ಕ್ಕಿಂತ ಹೆಚ್ಚಿನ ಮದ್ಯದ ಬಾಟೆಲ್‌ಗಳು ಕಳ್ಳತನವಾಗಿರುತ್ತದೆ. ನನ್ನ ಸಮಕ್ಷಮ ಒಂದು ಮರದ ದಡಿಯನ್ನು ಪೋಲೀಸರು ವಶಪಡಿಸಿಕೊಂಡಿರುತ್ತಾರೆ, ಸದರಿ ಅಮಾನತು ಮಹಜರನ್ನು ಸಂಜೆ 04.45 ರಿಂದ 06.15 ರವರೆಗೆ ಪೋಲೀಸರು ಮಹಜರು ಮಾಡಿರುತ್ತಾರೆ. ನಾನು, ಚಾಸಾ-1 ಮತ್ತು 8 ರವರು ನನ್ನೊಂದಿಗೆ ಸ್ಥಳದಲ್ಲಿ ಸಹಿ ಮಾಡಿರುತ್ತಾರೆ. ಸಾಕ್ಷಿಯು ನಿಪಿ-2 ಮಹಜರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಒಂದು ಮರದ ತುಂಡನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.76 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಾದ ಶ್ರೀ ಹೆಚ್.ಟಿ.ಆರ್. ವಕೀಲರಿಂದಃ

ಚಾಸಾ-1 ರವರು ಪಕ್ಕದ ಎಂ.ಎಸ್.ಐ.ಎಲ್. ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ನಾನು ಪಕ್ಕದಲ್ಲಿ ಮ್ಯಾಕನಿಕ್ ಕೆಲಸ ಮಾಡುತ್ತಿದ್ದೆ. ಘಟನ ಸ್ಥಳಕ್ಕೆ ಪೋಲೀಸರು 04.45 ರಿಂದ 06.15 ಮಹಜರು ಕ್ರಮ ನಡೆಸಿರುತ್ತಾರೆ. ಆ ದಿನ ಸೋಮವಾರ ಆಗಿತ್ತು. ಆ ದಿನ ಕೃಷ್ಣಪ್ಪರವರು ಬಂದಿದ್ದರು. ಮಹಜರನ ಬರವಣಿಗೆಯನ್ನು ಕೃಷ್ಣಪ್ಪರವರು ಮಾಡಿದರು. ಕೃಷ್ಣಪ್ಪರವರು ಬರವಣಿಗೆ ಮಾಡುವಾಗ ನಾನು ಪಕ್ಕದಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಅಂಗಂಡಿಗೂ ಎಂ.ಎಸ್.ಐ.ಎಲ್. ಅಂಗಡಿಗೂ ಒಂದೇ ಗೋಡೆಯಾಗಿರುತ್ತದೆ. ಪೋಲೀಸರು ಮಹಜರಿನಲ್ಲಿ ಏನೇನು ಬರೆದಿರುತ್ತಾರೆ ಎಂದುನಾನು ನೋಡಿಲ್ಲ. ಅದೇ ರೀತಿ ಅವರು ಏನು ಬರೆದುಕೊಂಡಿರುತ್ತಾರೆ ಗೊತ್ತಿಲ್ಲ. ಪಕ್ಕದ ಅಂಗಡಿಯಲ್ಲಿ ಕಳ್ಳತನವಾಗಿರುವುದರಿಂದ ಪೋಲೀಸರು ಸಹಿ

ಹಾಕು ಎಂದಿದ್ದರು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಯಾವಾ ಯಾವ ಮಾದರಿಯ ಮದ್ಯದ ಬಾಟಲ್ ಗಳು ಕಳ್ಳತನವಾಗಿದೆ ಮತ್ತು ಅವುಗಳ ಸಂಖ್ಯೆಗಳು ನನಗೆ ಗೊತ್ತಿಲ್ಲ.

ನಮ್ಮ ಅಂಗಡಿಯ ಎದರುಗಡೆ ಒಂದು ಮರ ಕ್ಯೊಯುವ ಸಾಮಿಲ್ ಇದೆ ಎಂದರೆ ಸರಿ. ಸದರಿ ಸಾಮಿಲ್ ಅಂಗಡಿಯಲ್ಲಿ ಮು.ಮಾ.76ರ ರೀತಿಯ ಮರದ ತುಂಡು ಸಿಗುತ್ತದೆ ಎಂದರೆ ಸಾಕ್ಷಿಯು ಸಿಗಬಹುದು ಎಂದು ನುಡಿಯುತ್ತಾರೆ. ಸದರಿ ಮರದ ತುಂಡನ್ನು ಮರದ ಮಿಲ್ ನಿಂದ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮರದ ತುಂಡು ಗೋಡೆಯ ಹಿಂಭಾಗ ಬಿದ್ದಿತ್ತು. ನನ್ನ ಸಮಕ್ಷಮ ಯಾವುದೇ ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1ರವರು ನನ್ನ ಸ್ನೇಹಿತರು ಆಗಿರುವುದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನ ಸ್ಥಳದ ದಕ್ಷಿಣಕ್ಕೆ ಶ್ರೀನಿವಾಸ್ ರವರ ಗೊಬ್ಬರದ ಅಂಗಡಿ ಬರುತ್ತದೆ. ನನಗೆ ಘಟನೆಯ ಬಗ್ಗೆ ಏನು ವಿಚಾರ ಗೊತ್ತಿಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಬರವಣಿಗೆ ಎಷ್ಟು ಪುಟ ಇದೆ ಎಂದು ನಾನು ನೋಡಿಲ್ಲ, ಒಂದು ಪುಟಕ್ಕೆ ಸಹಿ ಮಾಡಿರುತ್ತೇನೆ. ನಾನು ಮಹಜರನ್ನು ಓದಿ ನೋಡಿಲ್ಲ. ನನಗೆ ಪೋಲೀಸರಿಗೆ ಮಹಜರಿಗೆ ಬರಲು ಲಿಖಿತವಾಗಿ ನೋಟೀಸ್ ಅನ್ನು ಒಂದು ದಿನ ಮುಂಚಿತವಾಗಿ ನೀಡಿದ್ದರು. ನನ್ನ ಜೊತೆ ಅವಿನಾಶ್ ಎಂಬುವವರು ಸಹಿ ಮಾಡಿರುತ್ತಾರೆ, ಇವರು ಅರಕಲಗೂಡು ತಾಲ್ಲೂಕಿನ ಹುಲಿಕಲ್ ಗ್ರಾಮದವರು. ಅವರು ನನ್ನ ಜೊತೆ ಕೆಲಸ ಮಾಡುತ್ತಾರೆ. ಸದರಿಯವರಿಗೆ ನನ್ನ ಎದುರಿಗೆ ನೋಟೀಸ್ ನೀಡಿರಲಿಲ್ಲ. ನಾನು ಅವಿನಾಶ್ ಒಂದೇ ಕಡೆ ಕೆಲಸ ಮಾಡುತ್ತಿದ್ದರಿಂದ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

(ಉಳಿದ ಆರೋಪಿ ಪರ ವಕೀಲರುಗಳಾದ ಬಿ.ಎನ್.ಆರ್., ಆರ್.ಪಿ., ಬಿ.ಎಂ. ಮತ್ತು ಬಿ.ಹೆಚ್.ವಿ. ರವರು ಮೇಲಿನ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲಾಗಿ ಅಳವಡಿಸಿಕೊಂಡಿರುತ್ತಾರೆ. )

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ